"ಮಧುರ ಮಕ್ಕಳೇ- ಕೇವಲ ಎರಡು ಶಬ್ಧಗಳನ್ನು ನೆನಪು ಮಾಡಿ- ನಾವು ಸದ್ಗುರುವಿನ ಮೊಮ್ಮಕ್ಕಳಾಗಿದ್ದೇವೆ, ಬ್ರಹ್ಮಾತಂದೆಯ ಮುಖಾಂತರ ತಾತನ ಆಸ್ತಿಯನ್ನು ಪಡೆಯುತ್ತೇವೆ"

ಪ್ರಶ್ನೆ: ಏರಿದರೆ ವೈಕುಂಠರಸ..... ಈ ಗಾಯನವು ನೀವು ಮಕ್ಕಳಿಗೆ ಹೋಲುತ್ತದೆ, ಅನ್ಯರಿಗಲ್ಲ- ಏಕೆ?

ಉತ್ತರ: ಏಕೆಂದರೆ ನಿಮ್ಮ ಮುಂದೆ ಉನ್ನತವಾದ ಗುರಿಯಿದೆ. ನೀವು ತಂದೆಯ ಬಳಿ ಮನೆಯಾದ ಪರಮಧಾಮಕ್ಕೆ ಹೋಗುತ್ತೀರಿ, ನಂತರ ಹೊಸಪ್ರಪಂಚದಲ್ಲಿ ಬರುತ್ತೀರಿ. ಅನ್ಯ ಯಾರಿಗೂ ಸಹ ಈ ಗಾಯನವಿರಲು ಸಾಧ್ಯವಿಲ್ಲ. ಭಲೆ ಅವರಲ್ಲಿಯೂ ಸಹ ಕಚ್ಚಾ-ಪಕ್ಕಾ ನಂಬರ್ವಾರ್ ಇರುತ್ತಾರೆ ಆದರೆ ಅವರ ಮುಂದೆ ಯಾವುದೇ ಗುರಿಯಿರುವುದಿಲ್ಲ. ಅವರು ವೈಕುಂಠರಸವನ್ನು ಅರಿತುಕೊಂಡೆ ಇಲ್ಲ. ಈಗ ನಾವು ಆ ಮಾರ್ಗದನುಸಾರ ನಡೆಯಬೇಕು, ಎಲ್ಲಿ ಬೀಳುತ್ತಾರೆ ಮತ್ತು ಎಲ್ಲಿ ಸಂಭಾಲನೆ ಮಾಡಿಕೊಳ್ಳುವುದಿದೆ ಎಂದು ನೀವು ಮಕ್ಕಳೇ ಹೇಳುತ್ತೀರಿ.

ಗೀತೆ: ನಾವು ಆ ಮಾರ್ಗದಂತೆ ನಡೆಯಬೇಕು.........

ಓಂ ಶಾಂತಿ. ಯಾವಾಗ ಗೀತೆಯನ್ನು ಹಾಕಲಾಗುತ್ತದೆಯೋ ಆಗ ನಮಗಾಗಿ ಇದರಲ್ಲಿಯೂ ಜ್ಞಾನವಿದೆಯೆಂದು ಮಕ್ಕಳು ತಿಳಿಯುತ್ತೀರಿ. ಅಜ್ಞಾನಿ ಮನುಷ್ಯರಿಗಾಗಿ ಅಜ್ಞಾನವಿದೆ. ಜ್ಞಾನಿ ಆತ್ಮರಿಗೆ ಜ್ಞಾನವಿದೆ. ಅವಶ್ಯವಾಗಿ ಮಾಯೆಯ ಬಿರುಗಾಳಿಗಳೇ ಬೀಳಿಸುತ್ತವೆ ನಂತರ ಈಶ್ವರ ತಂದೆಯು ಏಳಿಸುತ್ತಾರೆ ಅರ್ಥಾತ್ ಬಿದ್ದುಹೋಗಿರುವವರಿಗೆ ಜ್ಞಾನದ ಸಂಜೀವಿನಿ ಮೂಲಿಕೆಯನ್ನು ಕೊಡುತ್ತಾರೆಂದು ತಿಳಿಯುತ್ತೀರಿ. ಒಂದುವೇಳೆ ಯಾರಾದರೂ ಕಾಮದ ಬಿರುಗಾಳಿಯಲ್ಲಿ ಬರುತ್ತಾರೆಂದರೆ ಬಿದ್ದುಹೋಗುತ್ತಾರೆ ನಂತರ ಕ್ರೋಧದ ಬಿರುಗಾಳಿಗಳೂ ಬರುತ್ತವೆ ಆಗ ಅವರು ಬೀಳುತ್ತಾರೆ. ಇದು ಬೀಳುವುದು ಮತ್ತು ಏಳುವುದಾಗಿದೆ. ಏರಿದರೆ ವೈಕುಂಠರಸ.... ಈ ಗೀತೆಯು ನಿಮ್ಮ ವಿನಃ ಮತ್ತ್ಯಾರಿಗೂ ಹೋಲುವುದಿಲ್ಲ. ಸನ್ಯಾಸಿಗಳಿಗೂ ಸಹ ಹೋಲುವುದಿಲ್ಲ. ಭಲೆ ಅವರ ಬಳಿಯೂ ಕಚ್ಚಾ ಸನ್ಯಾಸಿಗಳಿರುತ್ತಾರೆ ಆದರೆ ಅವರಿಗೆ ಯಾವುದೇ ಗುರಿಯಿಲ್ಲ. ನಿಮ್ಮದಂತೂ ದೊಡ್ಡದಕ್ಕಿಂತ ದೊಡ್ಡ ಜಬರ್ದಸ್ತ್ ಗುರಿಯಿದೆ. ಭಲೆ ಅವರು ಶಾಸ್ತ್ರ ಇತ್ಯಾದಿಗಳನ್ನು ಓದಿ ವಿದ್ವಾಂಸರಾಗಿಬಿಡುತ್ತಾರೆ ಆದರೆ ಯಾವುದೇ ರಾಜ್ಯಪದವಿಯ ಗುರಿಯಿಲ್ಲ. ಇದರಲ್ಲಿ ದೊಡ್ಡ ಉನ್ನತಗುರಿಯಿದೆ. ಮಕ್ಕಳು ತಿಳಿದುಕೊಂಡಿದ್ದೀರಿ - ಬೇಹದ್ದಿನ ಬಾಪ್ದಾದಾರವರು ಓದಿಸುತ್ತಾರೆ ಮತ್ತು ಮಮ್ಮಾರವರೂ ಓದಿಸುತ್ತಾರೆ ಮತ್ತು ಮಕ್ಕಳೂ ಓದಿಸುತ್ತಾರೆ. ನೀವು ತಾತನ ಮೊಮ್ಮಕ್ಕಳಾಗಿದ್ದೀರಿ. ಅಮೃತಸರದಲ್ಲಿ ತಾತ ಮತ್ತು ಮೊಮ್ಮಕ್ಕಳಿರುತ್ತಾರೆ. ಇದು ಏಳನೇ ಪೀಳಿಗೆಯಾಗಿದೆ, ಇದು ಎರಡನೇ ಪೀಳಿಗೆಯಾಗಿದೆ ಎಂದು ಹೇಳುತ್ತಾರೆ. ನೀವು ತಿಳಿದುಕೊಂಡಿದ್ದೀರಿ- ಬೇಹದ್ದಿನ ಬಾಪ್ದಾದಾರವರು ಓದಿಸುತ್ತಾರೆ ಮತ್ತು ಮಮ್ಮಾರವರೂ ಓದಿಸುತ್ತಾರೆ ಮತ್ತು ಮಕ್ಕಳೂ ಓದಿಸುತ್ತಾರೆ. ನೀವು ತಿಳಿದುಕೊಂಡಿದ್ದೀರಿ - ಸತ್ಯಯುಗದಲ್ಲಿ ದೇವತೆಗಳ ಪೀಳಿಗೆಯು ನಡೆಯುತ್ತದೆ, ಮೊದಲನೇ ಪೀಳಿಗೆ, ಎರಡನೇ ಪೀಳಿಗೆ..... ಇಲ್ಲಿ ನಿಮ್ಮದು ಪೀಳಿಗೆಗಳಿಲ್ಲ. ಒಬ್ಬರೇ ತಾತ, ಒಬ್ಬರೇ ತಂದೆ, ಒಬ್ಬರು ತಾಯಿ ಮತ್ತು ತಾತನ ಮುಂದೆ ಮತ್ತ್ಯಾರೂ ಇಲ್ಲ. ಈಗ ಇದನ್ನು ನೆನಪು ಮಾಡುವುದಂತೂ ಬಹಳ ಸಹಜವಾಗಿದೆ. ನಾವು ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿಯರಾಗಿದ್ದೇವೆ ಅಂದಾಗ ಬ್ರಹ್ಮಾ ನಮ್ಮ ತಂದೆಯಾದರು. ಶಿವ ತಾತನಾಗಿದ್ದಾರೆ. ಅವರಿಂದ ನಮಗೆ ಆಸ್ತಿಯು ಸಿಗುತ್ತದೆ, ಇದು ಎಷ್ಟೊಂದು ಸಹಜ ಮಾತಾಗಿದೆ. ನಾವು ಮೊಮ್ಮಕ್ಕಳು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೇವೆ. ಬ್ರಹ್ಮಾರವರೊಬ್ಬರೇ ಶಿವತಂದೆಯ ಮಗುವಾಗಿದ್ದಾರೆ. ನಾವು ವಿಷ್ಣುಕುಮಾರಿ ಅಥವಾ ಶಂಕರಕುಮಾರಿಯರಾಗಿದ್ದೇವೆ ಎಂದು ಹೇಳುವುದಿಲ್ಲ. ಪ್ರಜಾಪಿತನೆಂದು ಬ್ರಹ್ಮಾರವರೊಬ್ಬರಿಗೇ ಹೇಳಲಾಗುತ್ತದೆ. ತಂದೆಯು ಬಹಳ ಸಹಜವಾಗಿ ತಿಳಿಸುತ್ತಾರೆ- ನೀವು ಶಿವತಂದೆಯ ಆಸ್ತಿಯನ್ನು ತೆಗೆದುಕೊಳ್ಳಲು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ಶಿವತಂದೆಯು ತಿಳಿಸುತ್ತಾರೆ- ಹೀಗೆ ನೀವು ಯಾರಿಗಾದರೂ ತಿಳಿಸಿ, ನೆನಪಂತೂ ಅವಶ್ಯವಾಗಿ ಶಿವತಂದೆಯನ್ನೇ ಮಾಡಬೇಕಾಗಿದೆ, ಅವರಿಂದಲೇ ಆಸ್ತಿಯು ಸಿಗುತ್ತದೆ. ಮತ್ತ್ಯಾರನ್ನಾದರೂ ನೆನಪು ಮಾಡಿದರೆ ನರಕದ ಆಸ್ತಿಯು ಸಿಗುವುದು- ಇದು ತಿಳುವಳಿಕೆಯ ಮಾತಾಗಿದೆ. ಆಸ್ತಿಯು ತಾತನಿಂದ ಸಿಗುತ್ತದೆಯೇ ಹೊರತು ತಂದೆಯಿಂದಲ್ಲ.

ಸ್ವರ್ಗದ ರಚಯಿತ ಜ್ಞಾನದಾತ ತಂದೆಯಾಗಿದ್ದಾರೆ. ಶಿವತಂದೆಯು ಬ್ರಹ್ಮಾರವರ ಮುಖಾಂತರ ತಿಳಿಸುತ್ತಾರೆ, ನಂತರ ಈ ಬ್ರಹ್ಮಾರವರು ಕೇಳಿಸಿಕೊಳ್ಳುತ್ತಾರೆ. ಬ್ರಹ್ಮನಿಗೂ ಸಹ ಮೊಟ್ಟಮೊದಲ ಮಗಳು ಸರಸ್ವತಿ ಎಂದು ಗಾಯನವಿದೆ. ಬ್ರಹ್ಮಾಕುಮಾರಿ ಸರಸ್ವತಿ ಜಗದಂಬಾ ಎಂದು ಎಷ್ಟೊಂದು ಗಾಯನವಿದೆ. ಬ್ರಹ್ಮನಿಗಿಂತಲೂ ಹೆಚ್ಚಿನ ಆಸ್ತಿಯನ್ನು ಪಡೆಯುತ್ತಾರೆ ಆದ್ದರಿಂದ ಮೊದಲು ಲಕ್ಷ್ಮೀ ನಂತರ ನಾರಾಯಣ ಎಂದು ಗಾಯನ ಮಾಡಲಾಗುತ್ತದೆ. ನಿಮಗೆ ಗೊತ್ತಿದೆ- ನಾವು ಜಗದಂಬಾ ಮತ್ತು ಜಗತ್ಪಿತನ ಮಕ್ಕಳಾಗಿದ್ದೇವೆ ಅಂದರೆ ನಾವು ತಾತನಿಂದ ಆಸ್ತಿಯನ್ನೇಕೆ ಪಡೆಯಬಾರದು? ನಾವು ಬ್ರಹ್ಮಾಕುಮಾರ-ಕುಮಾರಿಯರು ತಾತ, ಮಕ್ಕಳು, ಮೊಮ್ಮಕ್ಕಳಾಗಿದ್ದೇವೆ. ಎರಡನೇ, ಮೂರನೇ ಪೀಳಿಗೆಯಲ್ಲಿ, ಮೊಮ್ಮಕ್ಕಳು

ಯಾರೂ ಇಲ್ಲ. ತಾತನನ್ನು ಯಾರು ತಾನೆ ನೆನಪು ಮಾಡುವುದಿಲ್ಲ? ನೀವು ತಿಳಿದುಕೊಂಡಿದ್ದೀರಿ- ನಾವು ಎಷ್ಟು ನೆನಪು ಮಾಡುತ್ತೇವೆಯೋ ಅಷ್ಟು ವಿಕರ್ಮಗಳು ವಿನಾಶವಾಗುತ್ತವೆ. ಯಾರಿಗೆ ಬೇಕಾದರೂ ತಿಳಿಸಬಹುದು- ಶಿವ ಪರಮಪಿತ ಪರಮಾತ್ಮ ಸ್ವರ್ಗದ ರಚಯಿತನಾಗಿದ್ದಾರೆ. ಅವಶ್ಯವಾಗಿ ಬ್ರಹ್ಮಾರವರ ಮುಖಾಂತರ ರಚಿಸುತ್ತಾರೆ ನಂತರ ಬ್ರಹ್ಮಾರವರ ಮುಖಾಂತರ ಬ್ರಹ್ಮಾಕುಮಾರ-ಕುಮಾರಿಯರಿಗೆ ತಿಳಿಸುತ್ತಾರೆ- ನನ್ನನ್ನು ಮತ್ತು ಆಸ್ತಿಯನ್ನು ನೆನಪು ಮಾಡಿ. ದೇಹದ ಎಲ್ಲಾ ಸಂಬಂಧಗಳನ್ನು ಮರೆತುಬಿಡಿ. ತಾವು ಸತ್ತರೆ ತಮ್ಮ ಪಾಲಿಗೆ ಜಗತ್ತೇ ಸತ್ತಂತೆ ಎಂದು ಹೇಳಲಾಗುತ್ತದೆಯಲ್ಲವೆ. ಆತ್ಮವು ಶರೀರದಿಂದ ಬೇರೆಯಾಗಿಬಿಟ್ಟರೆ ಏನೂ ಇರುವುದಿಲ್ಲ ದೇಹದ ಅಭಿಮಾನವು ಹೊರಟುಹೋಗುತ್ತದೆ. ನಾವು ತಂದೆಯ ಬಳಿ ಬಂದಿದ್ದೇವೆ, ಮತ್ತೆ ನಾವು ಸುಂದರರಾಗುತ್ತೇವೆ, ಈಗ ಕಪ್ಪಾಗಿದ್ದೇವೆ, ಇದು ಶ್ಯಾಮ ಮತ್ತು ಸುಂದರರಾಗುವ ನಾಟಕವಾಗಿದೆ. ಆತ್ಮವು ಪವಿತ್ರ ಮತ್ತು ಸುಂದರವಾಗುತ್ತದೆ. ಈಗ ನಿಮ್ಮ ಆತ್ಮವು ಕಬ್ಬಿಣದ ಸಮಾನವಾಗಿದೆ ಆದ್ದರಿಂದ ಶರೀರವೂ ಸಹ ಹಾಗೆಯೇ ಇದೆ. ಸತ್ಯಯುಗದಲ್ಲಿ ನೀವು ಸುಂದರರಾಗಿದ್ದಿರಿ, ಒಬ್ಬ ಸುಂದರ ಯಾತ್ರಿಕ ಸುಂದರರನ್ನಾಗಿ ಮಾಡಲು ಬರುತ್ತಾರೆ. ಅವರ ಆತ್ಮವಂತೂ ಸದಾ ಸುಂದರವಾಗಿದೆ, ಎಂದೂ ತುಕ್ಕು ಹಿಡಿಯುವುದಿಲ್ಲ ಏಕೆಂದರೆ ಅವರು ಜನನ-ಮರಣದಲ್ಲಿ ಬರುವುದಿಲ್ಲ. ಎಷ್ಟು ಸಹಜವಾಗಿ ತಿಳಿಸುತ್ತಾರೆ ಆದರೂ ಸಹ ಇಂತಹ ತಾತನನ್ನು ಮರೆತು ವಿಚ್ಛೇದನವನ್ನು ಕೊಟ್ಟುಬಿಡುತ್ತಾರೆ ಆದ್ದರಿಂದ ತಂದೆಯು ಹೇಳುತ್ತಾರೆ- ಮಹಾನ್ ಮೂರ್ಖರಿಗಿಂತ ಮೂರ್ಖರು ಮತ್ತು ಬುದ್ಧಿವಂತರಿಗಿಂತ ಬುದ್ಧಿವಂತರನ್ನು ನೋಡಬೇಕೆಂದರೆ ಇಲ್ಲಿಯೇ ನೋಡಿ. ಮೂರ್ಖರೂ ಸಹ ಇಂತಹವರಿದ್ದಾರೆ, ಅವರು ಅತಿಸಹಜ ಎರಡು ಮಾತುಗಳನ್ನೂ ಸಹ ಅರ್ಥ ಮಾಡಿಕೊಳ್ಳುವುದಿಲ್ಲ. ಕೇವಲ ತಿಳಿದುಕೊಳ್ಳಬೇಕಾಗಿದೆ- ನಾವು ಆತ್ಮರಾಗಿದ್ದೇವೆ, ಆ ನಿರಾಕಾರ ಪರಮಾತ್ಮ ತಾತನಾಗಿದ್ದಾರೆ. ಈ ಪ್ರಜಾಪಿತ ಬ್ರಹ್ಮನಂತೂ ಹೆಸರುವಾಸಿಯಾಗಿದ್ದಾರೆ ಅವರ ಮುಖಾಂತರ ಶಿವತಂದೆಯು ಆಸ್ತಿಯನ್ನು ಕೊಡುತ್ತಾರೆ, ಬ್ರಹ್ಮಾರವರನ್ನು ಬಿಟ್ಟರೆ ತಾತನನ್ನು ಬಿಡುತ್ತೀರೆಂದರೆ ಆಸ್ತಿಯು ಸಮಾಪ್ತಿಯಾಗಿಬಿಡುವುದು. ತಂದೆಯು ಎಷ್ಟೊಂದು ಸಹಜವಾಗಿ ತಿಳಿಸುತ್ತಾರೆ. ನಾವು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೇವೆ. ಬ್ರಹ್ಮಾ-ವಿಷ್ಣು-ಶಂಕರರು ಸೂಕ್ಷ್ಮವತನವಾಸಿಗಳಾಗಿದ್ದಾರೆ, ಅವರಲ್ಲಿಯೂ ಬ್ರಹ್ಮನನ್ನು ಪ್ರಜಾಪಿತನೆಂದು ಹೇಳುತ್ತಾರೆ. ಸೂಕ್ಷ್ಮವತನದಲ್ಲಂತೂ ಮನುಷ್ಯಸೃಷ್ಟಿಯನ್ನು ರಚಿಸಲಾಗುವುದಿಲ್ಲ. ಶಂಕರ ಅಥವಾ ವಿಷ್ಣುವನ್ನು ಪ್ರಜಾಪಿತನೆಂದು ಹೇಳಲು ಸಾಧ್ಯವಿಲ್ಲ. ಪ್ರಜೆಗಳ ಪಿತನಂತೂ ಅವಶ್ಯವಾಗಿ ಇಲ್ಲಿಯೇ ಇರಬೇಕು. ಬ್ರಹ್ಮನ ಮುಖಕಮಲದಿಂದ ಬ್ರಾಹ್ಮಣರು ಬಂದರು. ಬ್ರಾಹ್ಮಣರನ್ನೇ ಕೇಳಿ- ನೀವು ಯಾರ ಮುಖವಂಶಾವಳಿಯಾಗಿದ್ದೀರಿ? ಇದು ಕೇವಲ ಗಾಯನವಾಗಿದೆ ಆದರೆ ಆ ರೀತಿಯಲ್ಲ. ಈಗ ನೀವು ತಿಳಿದುಕೊಂಡಿದ್ದೀರಿ- ಪರಮಪಿತ ಪರಮಾತ್ಮ ಬ್ರಹ್ಮಾರವರ ಮುಖಾಂತರ ದೇವತಾ, ಕ್ಷತ್ರಿಯ ಧರ್ಮದ ಸ್ಥಾಪನೆ ಮಾಡುತ್ತಾರೆ ಅಂದಮೇಲೆ ಸಂಗಮಯುಗದಲ್ಲಿಯೇ ಮಾಡುತ್ತಾರೆ. ಸಂಗಮಯುಗದಲ್ಲಿ ಬ್ರಾಹ್ಮಣರು ಅವಶ್ಯವಾಗಿ ಬೇಕು. ಕಲಿಯುಗದ ಅಂತ್ಯದಲ್ಲಿ ಶೂದ್ರರಿದ್ದಾರೆ. ನೀವು ಮಕ್ಕಳಿಗೆ ಎಷ್ಟು ಚೆನ್ನಾಗಿ ತಿಳಿಸಲಾಗುತ್ತದೆ. ಶ್ರೀಮತವು ಪ್ರಸಿದ್ಧವಾಗಿದೆ. ಶ್ರೀಮತ್ಭಗವದ್ಗೀತಾ. ಅದರಿಂದ ಏನು ಕೇಳಲಾಗುತ್ತದೆ? ಶ್ರೀ ಶ್ರೀ ತಂದೆಯು ಜ್ಞಾನವನ್ನು ತಿಳಿಸಿರುವರು, ಶ್ರೇಷ್ಠಾತಿಶ್ರೇಷ್ಠರನ್ನಾಗಿ ಮಾಡಿರುವರು. ಈಗ ನೀವು ಪ್ರತ್ಯಕ್ಷದಲ್ಲಿ ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ನೀವು ಹೇಳುತ್ತೀರಿ- ಬಾಪ್ದಾದಾರವರು ನಾವು ಕಲ್ಪದ ಹಿಂದೆಯೂ ತಮ್ಮೊಂದಿಗೆ ಮಿಲನ ಮಾಡಿದ್ದೆವು, ನಾವು ತಾತನಿಂದ ಆಸ್ತಿಯನ್ನು ಪಡೆಯಲು ಬಂದಿದ್ದೇವೆ. ಒಳ್ಳೆಯದು ಅದರಿಂದ ಏನಾಗಿದ್ದೀರಿ? ಸೂರ್ಯವಂಶಿಯರೋ ಅಥವಾ ಚಂದ್ರವಂಶಿಯರೋ? ಶ್ರೀನಾರಾಯಣನನ್ನು ವರಿಸುವಿರೋ ಅಥವಾ ರಾಮನನ್ನೋ? ಹೇಳುತ್ತಾರೆ- ಬಾಬಾ, ನಾವಂತೂ ಶ್ರೀ ಶ್ರೀ ನಾರಾಯಣನನ್ನೇ ವರಿಸುತ್ತೇವೆ ಆದರೆ ಪುನಃ ಮರೆತುಹೋಗುತ್ತೇವೆ. ಯಾರು ಇಷ್ಟು ಯೋಗ್ಯರನ್ನಾಗಿ ಮಾಡುತ್ತಾರೆಯೋ ಅವರನ್ನೇ ಮರೆತುಹೋಗುತ್ತೇವೆ. ತಾತನನ್ನು ಮತ್ತು ತಂದೆಯನ್ನು ಬಹುಷಃ ಮರೆಯಬಾರದು ಆದರೆ ತಕ್ಷಣ ವಿಚ್ಛೇದನ ಕೊಟ್ಟುಬಿಡುತ್ತಾರೆ, ನೆನಪು ಮಾಡುವುದೇ ಇಲ್ಲ. ಜ್ಞಾನದ ಎರಡು ಅಕ್ಷರವನ್ನು ಧಾರಣೆ ಮಾಡುವುದೇ ಇಲ್ಲ. ನಾವು ಸದ್ಗುರುವಿನ ಮೊಮ್ಮಕ್ಕಳು ಅಥವಾ ತಾತನ ಮೊಮ್ಮಕ್ಕಳಾಗಿದ್ದೇವೆ. ಅವರಿಂದ ಪುರುಷಾರ್ಥದಿಂದ ಆಸ್ತಿಯನ್ನು ಪಡೆಯುತ್ತೇವೆ. ಲೌಕಿಕ ತಂದೆಯ ಆಸ್ತಿಯನ್ನಂತೂ ಹಂಚಲಾಗುತ್ತದೆ ಆದರೆ ಇಲ್ಲಿ ಹಂಚುವಂತಹ ವಸ್ತುವಿಲ್ಲ, ಇದರಲ್ಲಿ ಪುರುಷಾರ್ಥ ಮಾಡಬೇಕಾಗುತ್ತದೆ. ಯಾವುದೇ ಚಂದ್ರಮ ಇತ್ಯಾದಿಯಲ್ಲಿ ಫ್ಲಾಟ್ಸ್ನು ಖರೀದಿಸುವುದಿಲ್ಲ. ಇಲ್ಲಂತೂ ರಾಜ್ಯಭಾಗ್ಯದ ಮಾಲೀಕರಾಗುತ್ತೀರಿ. ಪಾತ್ರವನ್ನೂ ಸಹ ಇಲ್ಲಿಯೇ ಅಭಿನಯಿಸಬೇಕಾಗಿದೆ. ಯಾವುದೇ ಚಂದ್ರಗ್ರಹಕ್ಕೆ ಹೋಗಬೇಕಾಗಿಲ್ಲ. ಇದನ್ನೇ ವಿಜ್ಞಾನದ ಅಭಿಮಾನವೆಂದು ಹೇಳಲಾಗುತ್ತದೆ. ಅತಿಯಾದ ಅಭಿಮಾನದಲ್ಲಿ ಹೋದಾಗ ವಿನಾಶವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಏನೆಲ್ಲವನ್ನೂ ಮಾಡಿಬಿಟ್ಟಿದ್ದಾರೆ! ಲಕ್ಷಾಂತರ ಮೈಲಿಗಳಷ್ಟು ಹೋಗುತ್ತಾರೆ, ಈಗ ಎಲ್ಲಿಯವರೆಗೆ ತಲುಪಿದ್ದಾರೆ. ಮೇಲೆ ಚಂದ್ರಮನಲ್ಲಿ ಏನಿದೆ? ಎಂದು ಅವರಿಗೆ ಗೊತ್ತಾಗುತ್ತದೆ. ಚಂದ್ರಮನಂತೂ ಶೀತಲವಾಗಿದ್ದಾನಲ್ಲವೆ. ಸೂರ್ಯನ ಮುಂದೆ ಹೋದಾಗ ಸುಟ್ಟುಹೋಗುತ್ತಾರೆ. ವಿಜ್ಞಾನದ ಎಷ್ಟೊಂದು ಅಹಂಕಾರವಿದೆ. ಹೆಸರೂ ಸಹ ರಾಕೆಟ್ ಎಂದು ಇಟ್ಟಿದ್ದಾರೆ ಅದರೆ ತಂದೆಯಂತೂ ತಿಳಿಸಿದ್ದಾರೆ- ಆತ್ಮವಂತೂ ಎಲ್ಲದಕ್ಕಿಂತ ದೊಡ್ಡ ರಾಕೆಟ್ ಆಗಿದೆ. ಇರುವುದಂತೂ ಸಣ್ಣಬಿಂದು, ಅದೇನು ಭಾರವಿರುತ್ತದೆ? ಆದರೆ ಆ ಬಿಂದುವಿನಲ್ಲಿ ಎಷ್ಟೊಂದು ಜ್ಞಾನವಿದೆ! ಒಂದು ಸೆಕೆಂಡಿನಲ್ಲಿ ಎಲ್ಲಿಂದ ಎಲ್ಲಿಗೋ ಹಾರಿಹೋಗುತ್ತದೆ. ತಂದೆಯನ್ನು ನೆನಪು ಮಾಡಿದರೆ ಸೆಕೆಂಡಿನಲ್ಲಿ ಹಾರಿಹೋಗುತ್ತದೆ. ಇದನ್ನೂ ಸಹ ತೀಕ್ಷ್ಣಬುದ್ಧಿಯವರೇ ತಿಳಿದು ತಿಳಿಸಿಕೊಡಬಲ್ಲರು. ಶಿವತಂದೆಯೂ ಬಿಂದುವಾಗಿದ್ದಾರೆ, ಲಿಂಗಸ್ವರೂಪವೆಂದು ಹೇಳುವುದರಿಂದ ಅಷ್ಟೊಂದು ದೊಡ್ಡರೂಪದಲ್ಲಿ ಆತ್ಮವಂತೂ ಇರುವುದಿಲ್ಲ. ಆತ್ಮ-ಪರಮಾತ್ಮನೂ ಸಹ ಇಷ್ಟು ದೊಡ್ಡ ರೂಪದಲ್ಲಿರುವುದಿಲ್ಲ ಎಂದು ತಿಳಿಸುತ್ತಾರೆ. ಪರಮಾತ್ಮನಂತೂ ಬ್ರಹ್ಮವಾಗಿದ್ದಾರೆ ಎಂದು ಮನುಷ್ಯರು ಹೇಳುತ್ತಾರೆ. ಏನನ್ನೂ ಅರಿತುಕೊಳ್ಳುವುದಿಲ್ಲ. ಎಲ್ಲಿಯತನಕ

ಸಮ್ಮುಖದಲ್ಲಿ ಬರುವುದಿಲ್ಲವೋ ಅಲ್ಲಿಯತನಕ ಪರಮಾತ್ಮನ ನಾಮ, ರೂಪ, ಇತ್ಯಾದಿಗಳನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ನಾವು ಭಲೆ ಶಿವತಂದೆಯ ಚಿತ್ರವನ್ನು ತೋರಿಸುತ್ತೇವೆ. ಆದರೆ ಅವರು ಈ ರೀತಿಯಲ್ಲ. ಅವರಂತೂ ಬಿಂದುವಾಗಿದ್ದಾರೆ ಆದರೆ ಬಿಂದುವಿನ ಪೂಜೆ ಹೇಗೆ ಮಾಡುತ್ತೀರಿ, ಹೂವು ಇತ್ಯಾದಿಗಳನ್ನು ಹೇಗೆ ಇಡುತ್ತೀರಿ! ಆದ್ದರಿಂದ ಈ ಭಕ್ತಿಮಾರ್ಗವು ನಡೆಯುತ್ತಾ ಬಂದಿದೆ. ಪೂಜೆಗಾಗಿ ಮಂದಿರದಲ್ಲಿ ಬಹಳ ದೊಡ್ಡ ರೂಪವನ್ನು ಮಾಡಿಬಿಟ್ಟಿದ್ದಾರೆ.

ಒಳ್ಳೆಯದು- ತಂದೆಯು ತಿಳಿಸುತ್ತಾರೆ- ಯಾರ ಬುದ್ಧಿಯಲ್ಲಿ ಈ ಜ್ಞಾನವು ಕುಳಿತುಕೊಳ್ಳದೇ ಇರಬಹುದು ಆದರೂ ಸಹ ಇದನ್ನಂತೂ ತಿಳಿದುಕೊಂಡಿದ್ದೀರಲ್ಲವೆ- ನಾವು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೇವೆ, ತಾತನಿಗೆ ಮೊಮ್ಮಕ್ಕಳಾಗಿದ್ದೇವೆ. ಶ್ರೇಷ್ಠಾತಿಶ್ರೇಷ್ಠ ಶಿವ ಭಗವಂತನಾಗಿದ್ದಾರೆ. ಅವರ ರಚನೆಗೆ ಭಗವಂತನೆಂದು ಹೇಳಲು ಸಾಧ್ಯವಿಲ್ಲ, ನಾವು ಅವರ ಮೊಮ್ಮಕ್ಕಳಾಗಿದ್ದೇವೆ. ಆ ಶ್ರೇಷ್ಠತಂದೆಯು ತಿಳಿಸುತ್ತಾರೆ- ನಾನು ನಿಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತೇನೆ. ನಿಮಗೂ ಸಹ ಗೊತ್ತಿದೆ- ನಾವೀಗ ತಮೋಪ್ರಧಾನ, ಕಪ್ಪಾಗಿದ್ದೇವೆ. ಈಗ ತಂದೆಯಿಂದ ಸತೋಪ್ರಧಾನ, ಸುಂದರರಾಗುತ್ತಿದ್ದೇವೆ. ರಾಮನೂ ಸಹ ಸುಂದರನಾಗಿದ್ದರು, ಆದರೆ ಕೃಷ್ಣನಿಗಿಂತ ಎರಡು ಕಲೆ ಕಡಿಮೆ. ಅವರೂ ಸಹ ಈಗ ಕಪ್ಪಾಗಿಬಿಟ್ಟಿದ್ದಾರೆ. ಕೃಷ್ಣನಿಗಂತೂ ಸರ್ಪವು ಕಚ್ಚಿತೆಂದು ಹೇಳುತ್ತಾರೆ ಆದರೆ ಇಂತಹ ಯಾವುದೇ ಮಾತಿಲ್ಲ ಆದರೆ ಕಾಮಚಿತೆಯ ಮೇಲೆ ಏರುವುದರಿಂದ ಕಪ್ಪಾಗುತ್ತಾರೆ. ಶ್ಯಾಮ ಮತ್ತು ಸುಂದರರಾಗುತ್ತಾರೆ. ಈಗ ಪುನಃ ಸತೋಪ್ರಧಾನರಾಗಲು ತಂದೆಯನ್ನು ನೆನಪು ಮಾಡಬೇಕಾಗಿದೆ. ಒಬ್ಬ ಯಾತ್ರಿಕನು ಅನೇಕರನ್ನು ಸುಂದರರನ್ನಾಗಿ ಮಾಡುತ್ತಾರೆ, ವಿಶ್ವದ ಮಾಲೀಕರನ್ನಾಗಿ ಮಾಡುತ್ತಾರೆ. ಕೇವಲ ತಿಳಿಸುತ್ತಾರೆ- ತಂದೆಯಾದ ನನ್ನನ್ನು ನೆನಪು ಮಾಡಿ, ಇಲ್ಲದಿದ್ದರೆ ಆಸ್ತಿಯು ಹೇಗೆ ಸಿಗುತ್ತದೆ? ವಿಕರ್ಮ ವಿನಾಶಕ್ಕಾಗಿ ಯೋಗಾಗ್ನಿಯು ಬೇಕು. ಗಳಿಗೆ-ಗಳಿಗೆಯೂ ನೆನಪು ಮಾಡಬೇಕಾಗಿದೆ. ಕೆಲವರು ನಾವು ಮಕ್ಕಳಂತೂ ಆಗಿದ್ದೇವಲ್ಲವೆ ಎಂದು ತಿಳಿಯುತ್ತಾರೆ ಆದರೆ ಇಡೀ ದಿನ ನೆನಪು ಮಾಡದಿದ್ದರೆ ವಿಕರ್ಮ ವಿನಾಶವಾಗುವುದಿಲ್ಲ. ಖುಷಿಯ ನಶೆಯೇರುವುದಿಲ್ಲ. 20-25 ವರ್ಷದವರೆಗೂ ಸಹ ಈ ಮಾತು ಬುದ್ಧಿಯಲ್ಲಿ ಕುಳಿತುಕೊಳ್ಳುವುದಿಲ್ಲ, ಮರೆತುಹೋಗುತ್ತಾರೆ ಮತ್ತು ಹಳೆಯ ಪ್ರಪಂಚದಲ್ಲಿ ಹೋಗಿ ಅದೃಷ್ಟಕ್ಕೆ ಗೆರೆ ಎಳೆದುಕೊಳ್ಳುತ್ತಾರೆ. ತಂದೆ-ತಾಯಿಯ ಮಡಿಲಿನಲ್ಲಿ ಬಂದಾಗಲೇ ಅದೃಷ್ಟವು ಪ್ರಾರಂಭವಾಗುತ್ತದೆ. ಮಮ್ಮಾ-ಬಾಬಾ ಎಂದು ಹೇಳುವುದರಿಂದ ಸ್ವರ್ಗದ ಹಕ್ಕುದಾರರಂತೂ ಆಗಿದ್ದೀರಲ್ಲವೆ. ನಮ್ಮ ಹಿಂದೂಸ್ಥಾನವು ಎಲ್ಲದಕ್ಕಿಂತ ಶ್ರೇಷ್ಠವೆಂದು ಪ್ರಜೆಗಳೂ ಹೇಳುತ್ತಾರೆ ಆದರೆ ಎಲ್ಲದಕ್ಕಿಂತ ಶ್ರೇಷ್ಠವಾಗಿದ್ದರೆ ಸಾಲವನ್ನೇಕೆ ತೆಗೆದುಕೊಳ್ಳುತ್ತೀರಿ, ಏಕೆ ಕಂಗಾಲರಾಗುತ್ತೀರಿ? ಇಲ್ಲಿಂದ ಬಹಳ ಧನವನ್ನು ತೆಗೆದುಕೊಂಡು ಹೋಗಿದ್ದಾರೆ, ಕಾರ್ಖಾನೆಗಳಿಂದ ಸಂಪಾದನೆಯಾಗುತ್ತಿದೆ. ಕಾರ್ಖಾನೆಗಳನ್ನು ತೆರೆಯದಿದ್ದರೆ ಯಾರಿಗೂ ನೌಕರಿಯೂ ಸಿಗಲು ಸಾಧ್ಯವಿಲ್ಲ. ನೌಕರಿ ಸಿಗದಿದ್ದರೆ ಪಾಲನೆಯನ್ನು ಹೇಗೆ ಮಾಡುತ್ತೀರಿ? ಆದ್ದರಿಂದ ಭಾರತಕ್ಕಾಗಿ ಎಷ್ಟೊಂದು ಯುಕ್ತಿಗಳನ್ನು ರಚಿಸಲಾಗಿದೆ. ಮಕ್ಕಳಿಗೆ ತುಂಬಾ ದುಃಖವಾಗಬಾರದು ಅದಕ್ಕಾಗಿ ಈ ಯುಕ್ತಿಗಳಿವೆ. ಇಲ್ಲಿಂದ ಅನೇಕರು ನೌಕರಿ ಮಾಡಲು ಹೊರಗೆ ಹೋಗುತ್ತಾರೆ ಏಕೆಂದರೆ ಅಲ್ಲಿ ತುಂಬಾ ಹಣವು ಸಿಗುತ್ತದೆ, ಎಲ್ಲಾ ಪತಿತರನ್ನು ಬಂದು ಪಾವನ ಮಾಡುತ್ತೇನೆ. ಮುಳ್ಳುಗಳೊಂದಿಗೂ ಪ್ರೀತಿಯಿದೆ ಆದ್ದರಿಂದ ಮುಳ್ಳುಗಳಿಂದ ಯಾರು ಹೂಗಳಾಗುತ್ತಾರೆ ಅವರ ಮೇಲೂ ಪ್ರೀತಿಯಿದೆ. ನಾಟಕದನುಸಾರ ಎಲ್ಲರಿಗೆ ಸದ್ಗತಿ ಕೊಡುತ್ತೇನೆ, ಎಲ್ಲರ ಸದ್ಗತಿದಾತ ರಾಮ...... ಅಂದಾಗ ಎಲ್ಲರಿಗೆ ಪ್ರಿಯನಾದೆನಲ್ಲವೆ. ಅದರಲ್ಲಿ ಮುಳ್ಳುಗಳೂ ಇದ್ದಾರೆ, ಹೂಗಳೂ ಇದ್ದಾರೆ. ನಿಯಮದನುಸಾರ ಸ್ವರ್ಗದ ಸ್ಥಾಪನೆಯಾಗುತ್ತದೆ ಎಂದರೆ ಅದಕ್ಕಾಗಿ ಯೋಗ್ಯರನ್ನಾಗಿಯೂ ಮಾಡುತ್ತಾರೆ. ಹೇಳುತ್ತಾರಲ್ಲವೆ- ಪತಿತ-ಪಾವನ ಬನ್ನಿ, ಬಂದು ಪಾವನರನ್ನಾಗಿ ಮಾಡಿ. ಈಗ ನೀವು ತಿಳಿದುಕೊಂಡಿದ್ದೀರಿ- ಪತಿತ-ಪಾವನ ಬನ್ನಿ, ಬಂದು ಪಾವನರನ್ನಾಗಿ ಮಾಡಿ. ಈಗ ನೀವು ತಿಳಿದುಕೊಂಡಿದ್ದೀರಿ- ಪತಿತ-ಪಾವನ ತಂದೆಯು ಬಂದಿದ್ದಾರೆ, ಇಡೀ ವಿಶ್ವವನ್ನು ಅದರಲ್ಲಿಯೂ ವಿಶೇಷವಾಗಿ ಭಾರತವನ್ನು ಪಾವನವನ್ನಾಗಿ ಮಾಡುತ್ತಾರೆ. ಸರ್ವೋದಯದ ಲೀಡರ್ ಹೆಸರನ್ನು ಇಟ್ಟುಕೊಂಡಿದ್ದಾರೆ. ಇದನ್ನೂ ಸಹ ತಮ್ಮ ಮೇಲೆ ಹೆಸರನ್ನಿಟ್ಟುಕೊಂಡಿದ್ದಾರೆ, ಹೇಗೆ ಶ್ರೀ ಶ್ರೀ 108 ಎಂದು ಕರೆಸಿಕೊಳ್ಳುತ್ತಾರೆ. ಸರ್ವ ಎಂದರೆ ಎಲ್ಲವೂ ಎಂದರ್ಥ. ಯಾವುದೇ ಮನುಷ್ಯನಂತೂ ಎಲ್ಲರ ಸದ್ಗತಿ ಮಾಡಲು ಸಾಧ್ಯವಿಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೇಹಭಾನವನ್ನು ಮರೆಯಲು ಜೀವಿಸಿದ್ದಂತೆಯೇ ಸಾಯಬೇಕಾಗಿದೆ. ತಾವು ಸತ್ತರೆ ತಮ್ಮ ಪಾಲಿಗೆ ಜಗತ್ತೇ ಸತ್ತಂತೆ ಪದೇ-ಪದೇ ಈ ದೇಹದಿಂದ ಭಿನ್ನರಾಗುವ ಅಭ್ಯಾಸ ಮಾಡಬೇಕಾಗಿದೆ.

2. ನಾವು ತಾತನ ಮೊಮ್ಮಕ್ಕಳಾಗುತ್ತೇವೆ. ನಾವು ಯೋಗ್ಯರಾಗಿ ಅವರಿಂದ ಪೂರ್ಣ ಆಸ್ತಿಯನ್ನು ಪಡೆಯಬೇಕಾಗಿದೆ. ಆತ್ಮವನ್ನು ಯೋಗಬಲದಿಂದ ಯೋಗ್ಯವನ್ನಾಗಿ ಮಾಡಿಕೊಳ್ಳಬೇಕಾಗಿದೆ. ಖುಷಿಯಲ್ಲಿರಬೇಕಾಗಿದೆ.

ವರದಾನ: ಅಶಾಂತಿ ಅಥವಾ ಗೊಂದಲಗಳ ಮಧ್ಯೆ ಶಾಂತಿ ಕುಂಡದ ಅನುಭೂತಿ ಮಡುವಮತಹ ಶಾಮತಿ ಸ್ವರೂಪ ಭವ

ಎಂದಾದರೂ ಯಾವುದೇ ಸ್ಥಾನದಲ್ಲಿ ಗೊಂದಲ ಇದ್ದಲ್ಲಿ, ಆ ಜಗಳಗಳ ಸಮಯದಲ್ಲಿ ಶಾಂತಿಯ ಶಕ್ತಿಯ ಕಮಾಲ್ ತೋರಿಸಿ. ಎಲ್ಲರ ಬುದ್ಧಿಯಲ್ಲಿ ಬರಲಿ ಇಲ್ಲಂತೂ ಶಾಂತಿಯ ಕುಂಡಯಿದೆ ಎಂದು, ಶಾಂತಿ ಕುಂಡ ಆಗಿ ಶಾಂತಿಯ ಶಕ್ತಿಯನ್ನು ಹರಡಿ, ಶಾಂತಿ ಸ್ವರೂಪರಾಗಿ ಶಾಂತಿ ಕುಂಡದ ಅನುಭವ ಮಾಡಿಸಿ. ಆ ಸಮಯದಲ್ಲಿ ವಾಚಾ ನ ಸೇವೆ ಮಾಡಲು ಸಾಧ್ಯವಿಲ್ಲ ಆದರೆ ಮನಸ್ಸಿನಿಂದ ಶಾಂತಿ ಕುಂಡದ ಪ್ರತ್ಯಕ್ಷತೆಯನ್ನು ಮಾಡಲು ಸಾಧ್ಯ. ಎಲ್ಲರಿಗೂ ವೈಭ್ರೇಷನ್ ಬರಬೇಕು ಕೇವಲ ಇಲ್ಲಿ ಮಾತ್ರ ಶಾಂತಿ ಸಿಗುವುದು ಎಂದು. ಆದ್ದರಿಂದ ಈ ರೀತಿಯ ವಾಯುಮಂಡಲವನ್ನು ಮಾಡಿ.

**ಸ್ಲೋಗನ್:** ಸ್ವಯಂನ ಹಾಗೂ ಸರ್ವರ ಚಿಂತೆಗಳನ್ನು ದೂರ ಮಾಡುವುದೇ ಶುಭಚಿಂತಕರಾಗುವುದಾಗಿದೆ.